# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1297 |
| ಮಾನ್ಯ ಸದಸ್ಯರ ಹೆಸರು | : | ಶ್ರೀಮತಿ ಹೇಮಲತಾ ನಾಯಕ್ |
| ಉತ್ತರಿಸುವ ದಿನಾಂಕ | : | 22-08-2025 |
| ಉತ್ತರಿಸುವ ಸಚಿವರು | : | ಮಾನ್ಯ ಸಮಾಜ ಕಲ್ಯಾಣ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಅನುಸೂಚಿತ ಜಾತಿ ಹಾಗೂ ಅನುಸೂಚಿತ ಪಂಗಡಕ್ಕೆ ಸೇರಿದ ಹಲವಾರು ವಿದ್ಯಾರ್ಥಿಗಳಿಗೆ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಸಮರ್ಪಕವಾದಷ್ಟು ವಸತಿ ನಿಲಯಗಳಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಜಿಲ್ಲಾವಾರು ಕೊರತೆ ಇರುವ ಮಾಹಿತಿಯನ್ನು ನೀಡುವುದು; | ಹೌದು.<br><br>ಸರ್ಕಾರದ ಸುತ್ತೋಲೆ ಸಂಖ್ಯೆ:ಸಕಇ 87 ಸಮನ್ವಯ 2013, ದಿನಾಂಕ:20-07-2013 ರನ್ವಯ ಇಲಾಖೆಯ ವಿದ್ಯಾರ್ಥಿನಿಲಯಗಳಿಗೆ ಪ್ರವೇಶ ಕೋರಿ ಅರ್ಜಿ ಸಲ್ಲಿಸುವ ಎಲ್ಲಾ ಅರ್ಹ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ನಿಲಯದಲ್ಲಿ ಪ್ರವೇಶ ಕಲ್ಪಿಸಲಾಗುತ್ತಿದೆ.<br><br>ಇಲಾಖೆಯ ವಿದ್ಯಾರ್ಥಿ ನಿಲಯಗಳಲ್ಲಿ ಮಂಜೂರಾತಿ ಸಂಖ್ಯೆಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಅರ್ಜಿಗಳು ಸ್ವೀಕೃತವಾಗುವ ವಿದ್ಯಾರ್ಥಿ ನಿಲಯಗಳ ಕಟ್ಟಡದ ಸಾಮರ್ಥ್ಯನುಸಾರ (Permissible Strength) ಪ್ರವೇಶಾವಕಾಶ ಕಲ್ಪಿಸಲು ಅವಕಾಶ ಕಲ್ಪಿಸಲಾಗಿರುತ್ತದೆ. ಅದಾಗ್ಯೂ ಹೆಚ್ಚುವರಿ ವಿದ್ಯಾರ್ಥಿಗಳನ್ನು ಬಾಡಿಗೆ ಕಟ್ಟಡ ಪಡೆದು ಪ್ರವೇಶಾತಿ ಕಲ್ಪಿಸಲು ಕ್ರಮವಹಿಸಲಾಗುತ್ತಿದೆ. ಜಿಲ್ಲಾವಾರು ಕೊರತೆ ಇರುವ ಮಾಹಿತಿಯನ್ನು ಅನುಬಂಧ–1 ರಲ್ಲಿ ನೀಡಲಾಗಿದೆ. |
| ಆ) | ಕೊಪ್ಪಳ ಜಿಲ್ಲೆಯಲ್ಲಿ ಸಮಾಜ ಕಲ್ಯಾಣ ಇಲಾಖೆಯ ಎಷ್ಟು ಎಸ್.ಸಿ ಹಾಗೂ ಎಸ್.ಟಿ ವಿದ್ಯಾರ್ಥಿಗಳಿಗೆ ವಸತಿ ನಿಲಯಗಳು ಇರುತ್ತವೆ; ಲಭ್ಯವಿರುವ ವಸತಿ ನಿಲಯಗಳ ಪೈಕಿ ಎಷ್ಟು ಹಾಸ್ಟೆಲ್‌ಗಳು ಬಾಡಿಗೆ ಮನೆಗಳಲ್ಲಿ ಇವೆ; ಮತ್ತು ಎಷ್ಟು ಸರ್ಕಾರಿ ಕಟ್ಟಡಗಳಲ್ಲಿ ಇರುತ್ತವೆ; (ವಿವರ ಒದಗಿಸುವುದು) | ಕೊಪ್ಪಳ ಜಿಲ್ಲೆಯಲ್ಲಿ ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ನಡೆಸುತ್ತಿರುವ ಒಟ್ಟು 51 ಡಾ॥ಬಿ.ಆರ್.ಅಂಬೇಡ್ಕರ್ ಸರ್ಕಾರಿ ವಿದ್ಯಾರ್ಥಿ ನಿಲಯಗಳ ಪೈಕಿ 46 ವಿದ್ಯಾರ್ಥಿ ನಿಲಯಗಳು ಸ್ವಂತ ಕಟ್ಟಡಗಳಲ್ಲಿ ಮತ್ತು 5 ವಿದ್ಯಾರ್ಥಿ ನಿಲಯಗಳು ಬಾಡಿಗೆ/ಬಾಡಿಗೆ ರಹಿತ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿವೆ. |

---2

| | | |
|---|---|---|
| ಇ) | ಕೊಪ್ಪಳ ಜಿಲ್ಲೆಯಲ್ಲಿ ಪ್ರಸ್ತುತ ಇರುವ ಎಲ್ಲಾ ಹಾಸ್ಟೆಲ್‌ಗಳಲ್ಲಿ ಬಾಲಕ/ ಬಾಲಕಿಯರ ವಿದ್ಯಾರ್ಥಿಗಳ ಸಂಖ್ಯಾಬಲಕ್ಕೆ ಅನುಗುಣವಾಗಿ ಬೆಡ್ ಹಾಗೂ ಕಾಟ್‌ಗಳು ಮತ್ತು ಇತರೆ ಎಲ್ಲಾ ಮೂಲಭೂತ ಸೌಲಭ್ಯಗಳು ಲಭ್ಯವಿದೆಯೇ; ಲಭ್ಯವಿಲ್ಲದೇ ಇದ್ದಲ್ಲಿ, ಯಾವ ಯಾವ ಸೌಲಭ್ಯಗಳ ಕೊರತೆ ಇರುತ್ತದೆ; (ತಾಲ್ಲೂಕುವಾರು ಹಾಗೂ ಹಾಸ್ಟೆಲ್‌ವಾರು ವಿವರಗಳನ್ನು ನೀಡುವುದು) | ಕೊಪ್ಪಳ ಜಿಲ್ಲೆಯ ವಿದ್ಯಾರ್ಥಿನಿಲಯಗಳಲ್ಲಿ ಸಂಖ್ಯಾಬಲಕ್ಕೆ ಅನುಗುಣವಾಗಿ ಮೂಲಭೂತ ಸೌಕರ್ಯಗಳು ಲಭ್ಯವಿರುವ ಬಗ್ಗೆ ಹಾಗೂ ಕೊರತೆ ಇರುವ ಕುರಿತು ತಾಲ್ಲೂಕುವಾರು ವಿವರವನ್ನು ಅನುಬಂಧ-2 ರಲ್ಲಿ ನೀಡಲಾಗಿದೆ. |
| ಈ) | ಕೊಪ್ಪಳ ಜಿಲ್ಲೆಯಲ್ಲಿ ಪ್ರಸ್ತುತ ಇರುವ ಎಸ್.ಸಿ ಹಾಗೂ ಎಸ್.ಟಿ ಬಾಲಕರ ಹಾಗೂ ಬಾಲಕಿಯರ ವಿದ್ಯಾರ್ಥಿಗಳ ಹಾಸ್ಟೆಲ್‌ಗಳಲ್ಲಿ ವಿದ್ಯಾರ್ಥಿಗಳ ಸಂಖ್ಯಾಬಲಕ್ಕೆ ಅನುಗುಣವಾಗಿ ವಸತಿ ನಿಲಯಗಳು ಇವೆಯೇ; ಇಲ್ಲದಿದ್ದಲ್ಲಿ, ಯಾವ ಯಾವ ತಾಲ್ಲೂಕಿನಲ್ಲಿ ಹೆಚ್ಚುವರಿ ಹಾಸ್ಟೆಲ್‌ಗಳ ನಿರ್ಮಾಣದ ಅಗತ್ಯವಿದೆ; (ವಿವರ ಒದಗಿಸುವುದು) | ಕೊಪ್ಪಳ ಜಿಲ್ಲೆಯಲ್ಲಿ ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ಒಟ್ಟು 51 ಡಾ.ಬಿ.ಆರ್.ಅಂಬೇಡ್ಕರ್ ಸರ್ಕಾರಿ ವಿದ್ಯಾರ್ಥಿ ನಿಲಯಗಳನ್ನು ನಡೆಸಲಾಗುತ್ತಿದ್ದು, ಕಟ್ಟಡಗಳ ವಿವರ ಈ ಕೆಳಕಂಡಂತಿದೆ. |
| ಉ) | ಮೇಲಿನ ಹೊಸ ಕಟ್ಟಡ ನಿರ್ಮಾಣ ಹಾಗೂ ಮೂಲಭೂತ ಸೌಲಭ್ಯಗಳನ್ನು ಪೂರೈಸಲು ಸರ್ಕಾರ ಯಾವ ಕಾಲಮಿತಿಯೊಳಗೆ ಕ್ರಮ ಕೈಗೊಳ್ಳುತ್ತದೆ? (ವಿವರ ಒದಗಿಸುವುದು) | |

| **ವಿದ್ಯಾರ್ಥಿ ನಿಲಯಗಳ ಸಂಖ್ಯೆ** | **ಸ್ವಂತ ಕಟ್ಟಡ** | **ಬಾಡಿಗೆ/ ಬಾಡಿಗೆ ರಹಿತ** | **ನಿರ್ಮಾಣ ಹಂತ** | **ನಿವೇಶನ ಲಭ್ಯತೆ** |
|---|---|---|---|---|
| 51 | 46 | 5 | 4 | 1 |

ಮೇಲ್ಕಂಡಂತೆ ಬಾಡಿಗೆ/ ಬಾಡಿಗೆ ರಹಿತ ಕಟ್ಟಡಗಳಲ್ಲಿ ನಡೆಸುತ್ತಿರುವ 05 ವಿದ್ಯಾರ್ಥಿ ನಿಲಯಗಳ ಪೈಕಿ 04 ವಿದ್ಯಾರ್ಥಿ ನಿಲಯಗಳಿಗೆ ಸ್ವಂತ ಕಟ್ಟಡ ನಿರ್ಮಾಣ ಕಾಮಗಾರಿಗಳನ್ನು ಕೈಗೊಳ್ಳಲಾಗಿದ್ದು, ಕಾಮಗಾರಿಗಳು ವಿವಿಧ ಹಂತಗಳಲ್ಲಿ ಪ್ರಗತಿಯಲ್ಲಿರುತ್ತವೆ. ಉಳಿದ 01 ವಿದ್ಯಾರ್ಥಿ ನಿಲಯಕ್ಕೆ ನಿವೇಶನ ಲಭ್ಯವಿದ್ದು, ಪ್ರಸಕ್ತ ಸಾಲಿನಲ್ಲಿ ಅನುದಾನದ ಲಭ್ಯತೆಯನ್ನು ಆಧರಿಸಿ ಸ್ವಂತ ಕಟ್ಟಡ ನಿರ್ಮಾಣ ಕಾಮಗಾರಿಯನ್ನು ಕೈಗೊಳ್ಳಲು ಕ್ರಮವಹಿಸಲಾಗುವುದು.

ಮುಂದುವರೆದು, ಸ್ವಂತ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ವಿದ್ಯಾರ್ಥಿ ನಿಲಯಗಳ ಪೈಕಿ ಮಂಜೂರಾತಿ ಸಂಖ್ಯೆಗಿಂತ ದಾಖಲಾತಿ ಸಂಖ್ಯೆ ಹೆಚ್ಚಾಗಿರುವ ವಿದ್ಯಾರ್ಥಿ ನಿಲಯಗಳಲ್ಲಿ ಹೆಚ್ಚುವರಿ ವಾಸದ ಕೊಠಡಿ/ ಶೌಚಾಲಯ/ ಸ್ನಾನಗೃಹಗಳ ನಿರ್ಮಾಣ ಸಂಬಂಧವಾಗಿ

| | | |
|---|---|---|
| | | ಸಂಬಂಧಪಟ್ಟ ಜಿಲ್ಲೆಗಳ ಜಿಲ್ಲಾಧಿಕಾರಿಗಳ ಮೂಲಕ ಸೂಕ್ತ ಪ್ರಸ್ತಾವನೆಗಳನ್ನು ಪಡೆದು, ಅನುದಾನ ಲಭ್ಯತೆಗೆ ಅನುಗುಣವಾಗಿ ಹೆಚ್ಚುವರಿ ವಾಸದ ಕೊಠಡಿ/ ಶೌಚಾಲಯ/ ಸ್ನಾನಗೃಹಗಳ ನಿರ್ಮಾಣ ಕಾಮಗಾರಿಗಳನ್ನು ಕೈಗೊಳ್ಳಲು ಕ್ರಮವಹಿಸಲಾಗುತ್ತಿದೆ.<br><br>ಕೊಪ್ಪಳ ಜಿಲ್ಲೆಯ ವಿದ್ಯಾರ್ಥಿನಿಲಯಗಳಲ್ಲಿ ಮಂಜೂರಾತಿ ಸಂಖ್ಯೆಗೆ ಅನುಗುಣವಾಗಿ ವಿದ್ಯಾರ್ಥಿಗಳು ದಾಖಲಾಗಿರುವ ಬಗ್ಗೆ ಹಾಗೂ ಮಂಜೂರಾತಿ ಸಂಖ್ಯೆಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಅರ್ಜಿಗಳು ಸ್ವೀಕೃತವಾಗುವ ವಿದ್ಯಾರ್ಥಿ ನಿಲಯಗಳ ಕಟ್ಟಡದ ಸಾಮರ್ಥ್ಯನುಸಾರ (Permissible Strength) ಪ್ರವೇಶಾವಕಾಶ ಕಲ್ಪಿಸಲು ಅವಕಾಶ ಕಲ್ಪಿಸಲಾಗಿರುತ್ತದೆ. ವಿವರ ಅನುಬಂಧ-2 ರಲ್ಲಿ ನೀಡಲಾಗಿದೆ. |

**ಸಕಇ 719 ಪಕವಿ 2025**

**(ಡಾ: ಹೆಚ್.ಸಿ.ಮಹದೇವಪ್ಪ)**
**ಸಮಾಜ ಕಲ್ಯಾಣ ಸಚಿವರು**

ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀಮತಿ ಹೇಮಲತಾ ನಾಯಕ್ (ವಿಧಾನಸಭೆಯಿಂಧ ಚುನಾಯಿತರಾದವರು) ರವರ ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ:1159ಗೆ ಅನುಬಂಧ - 1 (ಎ)

| ಕ್ರ.ಸಂ | ಜಿಲ್ಲೆಯ ಹೆಸರು | ಸ್ವೀಕೃತವಾದ ಅರ್ಜಿಗಳ ಸಂಖ್ಯೆ | ದಾಖಲಾದ ವಿದ್ಯಾರ್ಥಿಗಳ ಸಂಖ್ಯೆ | ಬಾಕಿ ಉಳಿಕೆಯಾದ ಅರ್ಜಿಗಳ ಸಂಖ್ಯೆ |
|---|---|---|---|---|
| 1 | ಬಾಗಲಕೋಟೆ | 2994 | 2032 | 900 |
| 2 | ಬಳ್ಳಾರಿ | 2641 | 2243 | 352 |
| 3 | ಬೆಳಗಾವಿ | 4005 | 3280 | 668 |
| 4 | ಬೆಂಗಳೂರು ಗ್ರಾಮಾಂತರ | 887 | 858 | 14 |
| 5 | ಬೆಂಗಳೂರು ನಗರ | 413 | 400 | 3 |
| 6 | ಬೀದರ್ | 2456 | 1938 | 430 |
| 7 | ಚಾಮರಾಜನಗರ | 814 | 767 | 28 |
| 8 | ಚಿಕ್ಕಬಳ್ಳಾಪುರ | 2852 | 2772 | 62 |
| 9 | ಚಿಕ್ಕಮಗಳೂರು | 1330 | 1283 | 22 |
| 10 | ಚಿತ್ರದುರ್ಗ | 2370 | 2205 | 132 |
| 11 | ದಕ್ಷಿಣ ಕನ್ನಡ | 573 | 482 | 86 |
| 12 | ದಾವಣಗೆರೆ | 1680 | 1528 | 118 |
| 13 | ಧಾರವಾಡ | 603 | 526 | 66 |
| 14 | ಗದಗ | 1348 | 912 | 414 |
| 15 | ಹಾಸನ | 2037 | 1946 | 62 |
| 16 | ಹಾವೇರಿ | 2835 | 2317 | 485 |
| 17 | ಕಲಬುರಗಿ | 3898 | 2966 | 868 |
| 18 | ಕೊಡಗು | 361 | 356 | 2 |
| 19 | ಕೋಲಾರ | 2192 | 2097 | 28 |
| 20 | ಕೊಪ್ಪಳ | 3178 | 2070 | 999 |
| 21 | ಮಂಡ್ಯ | 1105 | 1026 | 59 |
| 22 | ಮೈಸೂರು | 1238 | 1166 | 55 |
| 23 | ರಾಯಚೂರು | 4581 | 3593 | 870 |
| 24 | ರಾಮನಗರ | 1001 | 979 | 10 |
| 25 | ಶಿವಮೊಗ್ಗ | 1766 | 1514 | 224 |
| 26 | ತುಮಕೂರು | 2999 | 2731 | 244 |
| 27 | ಉಡುಪಿ | 513 | 375 | 131 |
| 28 | ಉತ್ತರ ಕನ್ನಡ | 880 | 704 | 157 |
| 29 | ವಿಜಯನಗರ | 3132 | 2539 | 520 |
| 30 | ವಿಜಯಪುರ | 4438 | 3156 | 1229 |
| 31 | ಯಾದಗಿರಿ | 1780 | 1403 | 311 |
| | **ಒಟ್ಟು :** | **62900** | **52164** | **9549** |

ಆಯುಕ್ತರ ಪರವಾಗಿ,
ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು

ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀಮತಿ ಹೇಮಲತಾ ನಾಯಕ್ (ವಿಧಾನಸಭೆಯಿಂಧ ಚುನಾಯಿತರಾದವರು) ರವರ ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ:1159ಗೆ ಅನುಬಂಧ - 1 (ಬಿ)

| ಕ್ರ.ಸಂ | ಜಿಲ್ಲೆಯ ಹೆಸರು | ಸ್ವೀಕೃತವಾದ ಅರ್ಜಿಗಳ ಸಂಖ್ಯೆ | ದಾಖಲಾದ ವಿದ್ಯಾರ್ಥಿಗಳ ಸಂಖ್ಯೆ | ಬಾಕಿ ಉಳಿಕೆಯಾದ ಅರ್ಜಿಗಳ ಸಂಖ್ಯೆ |
|---|---|---|---|---|
| 1 | ಬಾಗಲಕೋಟೆ | 4377 | 1621 | 2648 |
| 2 | ಬಳ್ಳಾರಿ | 2811 | 1810 | 871 |
| 3 | ಬೆಳಗಾವಿ | 3621 | 1699 | 1782 |
| 4 | ಬೆಂಗಳೂರು ಗ್ರಾಮಾಂತರ | 640 | 465 | 172 |
| 5 | ಬೆಂಗಳೂರು ನಗರ | 1564 | 760 | 391 |
| 6 | ಬೀದರ್ | 1565 | 922 | 558 |
| 7 | ಚಾಮರಾಜನಗರ | 787 | 631 | 105 |
| 8 | ಚಿಕ್ಕಬಳ್ಳಾಪುರ | 2258 | 1859 | 361 |
| 9 | ಚಿಕ್ಕಮಗಳೂರು | 1539 | 1143 | 365 |
| 10 | ಚಿತ್ರದುರ್ಗ | 3698 | 2740 | 742 |
| 11 | ದಕ್ಷಿಣ ಕನ್ನಡ | 1057 | 426 | 620 |
| 12 | ದಾವಣಗೆರೆ | 3573 | 2304 | 1075 |
| 13 | ಧಾರವಾಡ | 3126 | 760 | 2153 |
| 14 | ಗದಗ | 2075 | 809 | 1145 |
| 15 | ಹಾಸನ | 2794 | 1929 | 781 |
| 16 | ಹಾವೇರಿ | 2496 | 1473 | 965 |
| 17 | ಕಲಬುರಗಿ | 5420 | 2543 | 2577 |
| 18 | ಕೊಡಗು | 166 | 137 | 27 |
| 19 | ಕೋಲಾರ | 1060 | 865 | 144 |
| 20 | ಕೊಪ್ಪಳ | 2778 | 1527 | 1191 |
| 21 | ಮಂಡ್ಯ | 833 | 523 | 289 |
| 22 | ಮೈಸೂರು | 3235 | 2236 | 926 |
| 23 | ರಾಯಚೂರು | 5322 | 3192 | 1817 |
| 24 | ರಾಮನಗರ | 420 | 331 | 73 |
| 25 | ಶಿವಮೊಗ್ಗ | 2686 | 1766 | 844 |
| 26 | ತುಮಕೂರು | 4239 | 2739 | 1174 |
| 27 | ಉಡುಪಿ | 633 | 342 | 260 |
| 28 | ಉತ್ತರ ಕನ್ನಡ | 640 | 313 | 312 |
| 29 | ವಿಜಯನಗರ | 2832 | 1868 | 817 |
| 30 | ವಿಜಯಪುರ | 7192 | 2665 | 4032 |
| 31 | ಯಾದಗಿರಿ | 2317 | 1116 | 1081 |
| | **ಒಟ್ಟು :** | **77754** | **43514** | **30298** |

ಆಯುಕ್ತರ ಪರವಾಗಿ,
ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು

**ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀಮತಿ ಹೇಮಲತಾ ನಾಯಕ್ (ವಿಧಾನಸಭೆಯಿಂಧ ಚುನಾಯಿತರಾದವರು) ರವರ ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ:1159ಗೆ ಅನುಬಂಧ - 2 ಇ**

| ಕ್ರ.ಸಂ | ಜಿಲ್ಲೆಯ ಹೆಸರು | ತಾಲ್ಲೂಕಿನ ಹೆಸರು | ಸ್ವೀಕೃತವಾದ ಅರ್ಜಿಗಳ ಸಂಖ್ಯೆ | ದಾಖಲಾದ ವಿದ್ಯಾರ್ಥಿಗಳ ಸಂಖ್ಯೆ | ಬಾಕಿ ಉಳಿಕೆಯಾದ ಅರ್ಜಿಗಳ ಸಂಖ್ಯೆ |
|---|---|---|---|---|---|
| 1 | ಕೊಪ್ಪಳ | ಗಂಗಾವತಿ | 1522 | 887 | 600 |
| 2 | ಕೊಪ್ಪಳ | ಕೊಪ್ಪಳ | 2112 | 1247 | 829 |
| 3 | ಕೊಪ್ಪಳ | ಕುಷ್ಟಗಿ | 759 | 571 | 169 |
| 4 | ಕೊಪ್ಪಳ | ಯಲಬುರ್ಗಾ | 1563 | 892 | 592 |
| | | **ಒಟ್ಟು** | **5956** | **3597** | **2190** |

ಆಯುಕ್ತರ ಪರವಾಗಿ,
ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು